# ಅಂತರ್ಜಾಲದ ಮೂಲಕ ತರಬೇತಿಯು ಅರಿವಿಗೆ ನೆರವು : ಡಿ.ಡಿ.ಪಿ.ಐ ನಾಗೂರ



ಗದಗ.ಜೂನ್ 8 : ಮೇಜರ್ ಸಿದ್ದಲಿಂಗಯ್ಯ ಹಿರೇಮಠ, ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ ಇವರ ಸದಾಶಯದಂತೆ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಇಂಗ್ಲೀಷ ವಿಷಯದಲ್ಲಿ ಆನ್‌ಲೈನ್ ತರಬೇತಿಯನ್ನು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಗದಗ ವತಿಯಿಂದಹಮ್ಮಿಕೊಳ್ಳಲಾಗಿತ್ತು. ತರಬೇತಿಯಲ್ಲಿ ಉಪನಿರ್ದೇಶಕರಾದ ಶ್ರೀ ಎನ್.ಎಚ್.ನಾಗೂರ ಇವರು ಭಾಗವಹಿಸಿ ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ, ತರಬೇತಿಯಲ್ಲಿ ಭಾಗವಹಿಸಿದ ಶಿಕ್ಷಕರು ಸಂಪನ್ಮೂಲ ವ್ಯಕ್ತಿಗಳು ಹೇಳಿದ ವಿಷಯವನ್ನು ಸರಿಯಾಗಿ ಅರ್ಥೈಸಿಕೊಂಡು, ತರಬೇತಿಯ ವಿಷಯಗಳು ವರ್ಗದ ಕೊಠಡಿಯಲ್ಲಿ ಅನುಷ್ಠಾನಗೊಳಿಸಬೇಕೆಂದು ಹೇಳಿದರು. ಶಿಕ್ಷಕರು ತಮ್ಮ ತರಗತಿ ಬೋಧನಾ ಶೈಕ್ಷಣಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಮತ್ತು ಮಕ್ಕಳಿಗೆ ಆಂಗ್ಲಭಾಷೆ ಕಲಿಸುವ ಕ್ರಮವನ್ನು ರೂಢಿಸಿಕೊಂಡು ಗ್ರಾಮೀಣ ಭಾಗದ ಮಕ್ಕಳಿಗೆ ಇಂಗ್ಲೀಷ ವಿಷಯದಲ್ಲಿ ಹೆಚ್ಚಿನ ಪರಿಣಿತಿಯನ್ನು ತರಲು ಈ ತರಬೇತಿ ಸಹಾಯಕವೆಂದು ಹೇಳಿದರು.

ಕುಮಾರಸ್ವಾಮಿ ಶಿಕ್ಷಕರು ಸರ್ಕಾರಿ ಪ್ರೌಢ ಶಾಲೆ ಲಿಂಗದಾಳ ಇವರು ಇಂಗ್ಲೀಷ ವಿಷಯದಲ್ಲಿ ಯಾವ ರೀತಿ ವಾಕ್ಯ ರಚನೆ ಮಾಡಬೇಕು ಎಂಬುದರ ಕುರಿತು ತರಬೇತಿ ನೀಡಿದರು. ತರಬೇತಿ ಕುರಿತು ಶಿಕ್ಷಕರಿಂದ ಉತ್ತಮ ಪ್ರತಿಕ್ರಿಯೆ ಮೂಡಿಬಂದಿದೆ. ಪ್ರಾಚಾರ್ಯರಾದ ಎಸ್.ಡಿ.ಗಾಂಜಿಯವರು ಉಪಸ್ಥಿತರಿದ್ದರು.ತರಬೇತಿಯ ನೋಡಲ್ ಅಧಿಕಾರಿಯಾಗಿಉಪನ್ಯಾಸಕರಾದ ಎಚ್.ಬಿ.ರಡ್ಡೇರ ಇವರು ಕಾರ್ಯನಿರ್ವಹಿಸುತ್ತಿದ್ದಾರೆ.ತಾಂತ್ರಿಕ ಸಹಾಯಕರಾಗಿ ತೇಜಸ್ ರಡ್ಡೇರ ನಿರ್ವಹಿಸಿದರು.

# ಅರ್ಜಿ ಸಲ್ಲಿಸಿದವರ ಹೆಸರು ಪರಿಶೀಲಿಸಿಕೊಳ್ಳಲು ಸೂಚನೆ

ಕೊಪ್ಪಳ, ಜೂ–: ಜಿಲ್ಲೆಯಲ್ಲಿ ನೂತನವಾಗಿ ರಚನೆಯಾಗಿರುವ ತಾಲೂಕುಗಳಲ್ಲಿ ವಿವಿಧ ಹುದ್ದೆಗಳಿಗಾಗಿ ಹೊರ ಮೂಲ ಸಂಸ್ಥೆಯಾದ ದಾವಣಗೆರೆಯ ಬಿ.ಕೆ. ರ್.ಸ್ವಾಮಿ ಸೆಕ್ಯೂರಿಟಿ ಏಜೆನ್ಸಿ ಮುಖಾಂತರ ಅರ್ಜಿ ಆಹ್ವಾನಿಸಲಾಗಿದ್ದ ಹುದ್ದೆಗಳಿಗೆ ಅಜಿ ಸಲ್ಲಿಸಿದವರ ಹೆಸರುಗಳನ್ನು ಪರಿಶೀಲಿಸಿಕೊಳ್ಳುವಂತೆ ಜಿ.ಪಂ. ಸಿ.ಇ.ಒ ರಘುನಂದನ್ ಮೂರ್ತಿ ತಿಳಿಸಿದ್ದಾರೆ.

ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಮೇ. 26 ರಂದು ಕೊನೆಯ ದಿನವಾಗಿತ್ತು. ಅದರಂತೆ ಅರ್ಜಿ ಸಲ್ಲಿಸಿದವರ ಹೆಸರುಗಳನನು ಜಿಲ್ಲಾ ಪಂಚಾಯತ ಮತ್ತು ತಾಲ್ಲೂಕು ಪಂಚಾಯತಿಗಳ ನೋಟಿಸ್ ಬೋರ್ಡ್‌ನಲ್ಲಿ ಹಾಗೂ www.koppal.nic.in ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಆದರೆ ಅನೇಕ ಅರ್ಜಿದಾರರು ನಿಗದಿತ ದಿನಾಂಕದೊಳಗೆ ಅರ್ಜಿ ಸಲ್ಲಿಸಿದಾಗ್ಯೂ ಜಿಲ್ಲಾ ಪಂಚಾಯತಿಗೆ ಹೊರಮೂಲ ಗುತ್ತಿಗೆ ಸಂಸ್ಥೆಯವರು ನೀಡಿರುವ ಪಟ್ಟಿಯಲ್ಲಿ ಹೆಸರು ಇಲ್ಲವೆಂದು ದೂರು ಸಲ್ಲಿಸಿದ್ದಾರೆ.

ಆದ್ದರಿಂದ ಅಂತಹ ಪ್ರಕರಣಗಳು ಇದ್ದಲ್ಲಿ ನಿಗದಿತ ದಿನಾಂಕದೊಳಗೆ ತಮ್ಮ ದಾಖಲೆಗಳೊಂದಿಗೆ ಹೊರಮೂಲ ಸಂಸ್ಥೆಯವರಿಗೆ ತಮ್ಮ ಅರ್ಜಿ ತಲುಪಿರುವ ಬಗ್ಗೆ ದಾಖಲಾತಿಗಳನ್ನು ಜೂನ್ 12 ರೊಳಗೆಗಾಗಿ ಜಿಲ್ಲಾ ಪಂಚಾಯತಿಯ ಇ-ಮೇಲ್ ವಿಳಾಸ: ceo_zp_kpl@nic.in ಗೆ ಸಲ್ಲಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹತ್ತಿ ಖರೀದಿ ಪ್ರಕ್ರಿಯೆ ಜೂನ್ 9 ರಿಂದ 11 ರ ವರೆಗೆ ಸ್ಥಗಿತ

ಧಾರವಾಡ .ಜೂ.08:ಭಾರತೀಯ ಹತ್ತಿ ನಿಗಮದ ವತಿಯಿಂದ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಹತ್ತಿ ಖರೀದಿ ಪ್ರಕ್ರಿಯೆಯನ್ನು ಜಾರಿಗೆ ತರುವ ಸದುದ್ದೇಶದಿಂದ ಮತ್ತು ಹತ್ತಿ ಬೆಳೆದ ರೈತರ ಹಿತದೃಷ್ಟಿಯಿಂದ, ಧಾರವಾಡ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವ್ಯಾಪ್ತಿಯಲ್ಲಿ ಬರುವಂತಹ ಬೇಲೂರಿನ ಕೈಗಾರಿಕಾ ಪ್ರದೇಶದಲ್ಲಿನ ರಾಮದೇವ ಅಗ್ರೋ ಇಂಡಸ್ಟ್ರೀಸ್ & ಶ್ರೀ ಲಕ್ಷ್ಮೀ ಕಾಟನ್ಸ್ ಫ್ಯಾಕ್ಟರಿಗಳ ಆವರಣದಲ್ಲಿ ಹತ್ತಿ ಖರೀದಿ ಕೇಂದ್ರ (ಪ್ರೊಕ್ಯೂರ್‌ಮೆಂಟ್ ಸೆಂಟರ್) ನ್ನು ಪ್ರಾರಂಭಿಸಲಾಗಿರುತ್ತದೆ.

ಈವರೆಗೆ ಹತ್ತಿ ಮಾರಾಟ ಮಾಡಿದ ರೈತರ ಖಾತೆಗೆ ಹಣ ಪಾವತಿಸುವ ಕೆಲಸ, ಖರೀದಿ ಮತ್ತು ಬಿಲ್ಲುಗಳ ಪಾವತಿ ಬಗ್ಗೆ ಕಛೇರಿ ಕೆಲಸಗಳು ಬಾಕಿ ಇರುವುದರಿಂದ ದಿನಾಂಕ:09-06-2020 ರಿಂದ 11-06-2020 ರ ವರೆಗೆ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆ ಯಡಿಯಲ್ಲಿ ಹತ್ತಿ ಖರೀದಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿರುತ್ತದೆ.

ಸರ್ಕಾರದ ಬೆಂಬಲಬೆಲೆ ಯೋಜನೆಯಡಿಯಲ್ಲಿ ಹತ್ತಿಖರೀದಿ ಪ್ರಕ್ರಿಯೆಯನ್ನು ದಿನಾಂಕ:12-06-2020 ರಿಂದ ಪುನಃ ಪ್ರಾರಂಭಿಸಲಾಗುವುದು. ರೈತ ಬಾಂಧವರು ಸಹಕರಿಸಬೇಕೆಂದು ಭಾರತೀಯ ಹತ್ತಿ ನಿಗಮದ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ..

# ಜೂನ್ 30 ರವರೆಗೆ ಹುಲಿಗೆಮ್ಮ ದೇವಿಯ ದರ್ಶನಕ್ಕೆ ಅವಕಾಶವಿಲ್ಲ : ಪಿ.ಸುನೀಲ್ ಕುಮಾರ್

ಕೊಪ್ಪಳ, ಜೂ.–: ಜಿಲ್ಲೆಯಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗ ತಡೆಗಟ್ಟುವ ಹಿನ್ನೆಲೆಯಲ್ಲಿ ದೇವಾಲಯಕ್ಕೆ ಬರುವ ಭಕ್ತರ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಮುಂಜಾಗೃತ ಕ್ರಮವಾಗಿ ಹುಲಿಗಿಯ ಹುಲಿಗೆಮ್ಮ ದೇವಿ ದೇವಸ್ಥಾನದಲ್ಲಿ ಜೂನ್ 30 ರವರೆಗೆ ದೇವಿಯ ದರ್ಶನಕ್ಕೆ ಭಕ್ತರಿಗೆ ಅವಕಾಶ ಇರುವುದಿಲ್ಲ ಎಂದು ಜಿಲ್ಲಾಧಿಕಾರಿ ಪಿ.ಸುನೀಲ್ ಕುಮಾರ್ ತಿಳಿಸಿದ್ದಾರೆ.

ಕೊಪ್ಪಳ ತಾಲೂಕಿನ ಹುಲಿಗೆಮ್ಮ ದೇವಿ ದೇವಸ್ಥಾನವು ಅಧಿಸೂಚಿತ "ಎ" ವರ್ಗದ ದೇವಸ್ಥಾನವಾಗಿದ್ದು, ಈ ದೇವಸ್ಥಾನಕ್ಕೆ ರಾಜ್ಯಾದ್ಯಂತ ಹಾಗೂ ಹೊರ ರಾಜ್ಯಗಳಾದ ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರ ರಾಜ್ಯಗಳಿಂದ ಭಕ್ತಾಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಾರೆ.

ಪ್ರಸಕ್ತ ಸಾಲಿನಲ್ಲಿ ಹುಲಿಗೆಮ್ಮ ದೇವಿಯ ಜಾತ್ರೆಯು ರದ್ದಾಗಿದ್ದು, ಜಾತ್ರೆಯ ತರುವಾಯ ಜೂನ್ ತಿಂಗಳಿನ ಅಂತ್ಯದವರೆಗೆ ಹರಕೆ ತೀರಿಸಲು ಸಾವಿರಾರು ಸಂಖ್ಯೆಯಲ್ಲಿ ಭಕ್ತಾಧಿಗಳು ದೇವಾಲಯಕ್ಕೆ ಬಂದು ವಾಸ್ತವ್ಯ ಹೂಡುತ್ತಿದ್ದಾರೆ. ದೇವಿ ದರ್ಶನಕ್ಕೆ ಬರುವ ಭಕ್ತರನ್ನು ನಿಯಂತ್ರಿಸಲು ಸಾಧ್ಯವಾಗದ ಪ್ರಯುಕ್ತ ದೇವಸ್ಥಾನದ ಆಡಳಿತ ಸಮಿತಿ ಅಭಿಪ್ರಾಯ ಹಾಗೂ ಹುಲಿಗಿ ಗ್ರಾಮ ಪಂಚಾಯಿತಿ ಠರಾವಿನ ಪ್ರಕಾರ ಕೋವಿಡ್ -19 ಸಾಂಕ್ರಾಮಿಕ ರೋಗ ತಡೆಗಟ್ಟುವ ಹಿನ್ನೆಲೆಯಲ್ಲಿ ಜೂನ್ ಅಂತ್ಯದವರಗೆ ದೇವಿ ದರ್ಶನಕ್ಕೆ ಅವಕಾಶ ಇರುವುದಿಲ್ಲ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಗದಗ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ಜಿಲ್ಲೆಯಲ್ಲಿ ಕೋವಿಡ್-19 ಸೋಂಕು ಹರಡದಂತೆ ನಿಯಂತ್ರಣ ಕ್ರಮ ಹಾಗೂ ಮುಂಗಾರು ಹಂಗಾಮಿನಲ್ಲಿ ರೈತರಿಗೆ ಬಿತ್ತನೆ ಬೀಜ, ರಸಗೊಬ್ಬರ ಪೂರೈಕೆಗೆ ಕೈಗೊಳ್ಳಲಾದ ಕ್ರಮಗಳ ಕುರಿತು ರಾಜ್ಯದ ಗಣಿ ಮತ್ತು ಭೂ ವಿಜ್ಞಾನ ಮತುತ ಜಿಲ್ಲಾ ಉಸ್ತುವಾರಿ ಸಚಿವ ಸಿ.ಸಿ.ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿತು. ರೋಣ ಶಾಸಕ ಕಳಕಪ್ಪ ಬಂಡಿ, ಗದಗ ಜಿಲ್ಲಾಧಿಕಾರಿ ಎಂ.ಜಿ. ಹಿರೇಮಠ, ಅಪರ ಜಿಲ್ಲಾಧಿಕಾರಿ ಸತೀಶಕುಮಾರ್ ಎಂ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಆನಂದ್ ಕೆ, ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿ ಯತೀಶ್ ಎನ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಸೂರ್ಯಸೇನ, ಉಪವಿಭಾಗಾಧಿಕಾರಿ ರಾಯಪ್ಪ ಹುಣಸಗಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತಿರಿದ್ದರು.

# ಎಲ್ಲರೂ ಪರಿಸರ ರಕ್ಷಣೆಗೆ ಮುಂದಾಗಬೇಕು:ಪಿಎಸ್‌ಐ ರಾಜೇಶ



ಗದಗ : ಮಾನವ ಕುಲದ ಭವಿಷ್ಯ ಪ್ರಕೃತಿಯ ಮೇಲೆ ಅವಲಂಭಿತವಾಗಿದೆ. ಯುವ ಸಮುದಾಯ ಸಸಿ ನೆಟ್ಟು ಪರಿಸರ ಸಂರಕ್ಷಣೆಗೆ ಮುಂದಾದರೇ ಹಸಿರುಮಯ ಸಮುದಾಯ ನಿರ್ಮಿಸಬಹುದು ಎಂದು ಬೆಟಗೇರಿ ಪೊಲೀಸ್ ಠಾಣೆಯ ಪಿ.ಎಸ್.ಐ ರಾಜೇಶ ಅವರು ಹೇಳಿದರು.

ಕ್ಷತ್ರಿಯ ಬ್ರಿಗೇಡ ಫೌಂಡೇಶನ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಸಸಿಗಳನ್ನು ವಿತರಿಸಿ ಅವರು ಮಾತನಾಡಿ, ಪ್ರಕೃತಿ ದೇವಾಲಯವಾದರೇ ಇಲ್ಲಿನ ಕಾಡುಗಳು ಗರ್ಭ ಗುಡಿಗಳಾಗಿವೆ. ಕೇವಲ ವರ್ಷಕ್ಕೊಮ್ಮೆ ನೆಪಕ್ಕೆ ಸಸಿಗಳನ್ನು ನೆಡದೇ ದಿನನಿತ್ಯ ಪರಿಸರ ಜಾಗೃತಿ ಮತ್ತು ಪರಿಸರ ರಕ್ಷಣೆ ನಡೆಯಬೇಕಿದೆ. ಈ ಹಸಿರು ಪರಿಸರ ನಿರ್ಮಾಣ ಕಾರ್ಯದಲ್ಲಿ ವಿದ್ಯಾರ್ಥಿಗಳ ಪಾತ್ರ ಬಹು ಮುಖ್ಯವಾಗಿದೆ ಎಂದರು.

ಡೆಪ್ಯೂಟಿ ಆರ್.ಎಫ್.ಓ ನಾರಾಯಣ ಜಯರಾಮ ಮಾತನಾಡಿ, ಸಸಿಗಳನ್ನು ನೆಡುವ ಮುಖಾಂತರ ನಿಮ್ಮ ಹುಟ್ಟು ಹಬ್ಬಗಳನ್ನು ಆಚರಿಸಿಕೊಳ್ಳಿರಿ, ಅರಣ್ಯ ಇಲಾಖೆಯಿಂದ ಸಸಿಗಳನ್ನು ವಿತರಿಸಲಾಗುವದು. ಸಸಿ ನೆಟ್ಟು ಸಾಮಾಜಿಕ ಹೊಣೆಗಾರಿಕೆ ಮೆರೆಯಬೇಕು ಎಂದರು.ಪತ್ರಕರ್ತ ಸುನೀಲಸಿಂಗ ಲದ್ದಿಗೇರಿ ಮಾತನಾಡಿ, ಉದ್ಯಾನನಗರಿ ಖ್ಯಾತಿಯ ಬೆಂಗಳೂರಿನ ಸ್ಥಾನವನ್ನು ಗುಜರಾತನ ಗಾಂಧಿನಗರ ಗಿಟ್ಟಿಸಿಕೊಂಡಿದೆ. ರಾಜ್ಯಾದ್ಯಂತ ಹಸಿರು ಪರಿಸರ ಸೃಷ್ಠಿಸಿ ರಾಜಧಾನಿ ಬೆಂಗಳೂರಿನ ಸ್ಥಾನಮಾನ ಕೊಡಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು. ಕ್ಷತ್ರಿಯ ಬ್ರಿಗೇಡ ಫೌಂಡೇಶನ ಸಂಸ್ಥಾಪಕ ಅಧ್ಯಕ್ಷ ಆರ್.ಟಿ.ಕಬಾಡಿ ಮಾತನಾಡಿ, ಮಾನವ ಜೀವಿ ಪ್ರಕೃತಿಯ ಒಂದು ಭಾಗವಾಗಿದ್ದಾನೆ. ಪ್ರಕೃತಿ ಸದಾ ಹಸಿರಾಗಿರುವಂತೆ ನೋಡುವುದೆ ನಮ್ಮ ಕರ್ತವ್ಯವಾದ ಹಿನ್ನಲೆಯಲ್ಲಿ ಅರಣ್ಯ ಇಲಾಖೆಯಿಂದ 50 ಸಸಿಗಳನ್ನು ಹಚ್ಚಲಾಗಿದೆ ಎಂದರು.ಈ ಸಂದರ್ಭದಲ್ಲಿ ಸಿತಾರಾ, ಪೂನಮ ಮೇರವಾಡೆ, ಎಸ್.ಎಸ್.ಕೆ ಸಮುದಾಯದ ಹಿರಿಯರಾದ ರಾಮಾಸಾ ಪವಾರ, ವಿಠ್ಠಲ ಮೇರವಾಡೆ, ಸಂಗಮೇಶ ಹಾದಿಮನಿ, ತೇಜಸ, ಸ್ನೇಹಾ, ಪ್ರವೀಣ, ವಿದ್ಯಾ, ವೀಣಾ, ಅಮೃತಾ, ಮನೀಷಾ ಕಾಟೇವಾಲ, ಸಾಯಿ, ರವಿಕಿರಣ, ವಿನಾಯಕ, ಕಾರ್ತಿಕ, ನಾಗರಾಜ, ಗಿರೀಶ, ಓಂ ಮೇರವಾಡೆ, ಕೋಮಲ, ಆಶ್ವಿನಿ, ಪೂರ್ವಿ, ಅನ್ನು, ಪೂಜಾ, ಗೀತಾ, ಕೌಶಿಕ, ನಮನ, ವರ್ಷಾ, ಖುಶಿ, ಸಂಜನಾ, ಕೀರ್ತಿ, ಪ್ರೀತಿ, ಪ್ರವೀಣ, ಸ್ನೇಹಾ ಮೇರವಾಡೆ ಸೇರಿದಂತೆ ಮುಂತಾದವರು ಇದ್ದರು.

# ಶಿಕ್ಷಣ ಸಚಿವರ ಜಿಲ್ಲಾ ಪ್ರವಾಸ

ಶಿವಮೊಗ್ಗ, ಜೂನ್-08 :- ರಾಜ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವ ಎಸ್. ಸುರೇಶಕುಮಾರ್‌ರವರು ಜೂನ್-09 ರಂದು ಸಂಜೆ 04.00ಕ್ಕೆ ಶಿವಮೊಗ್ಗಕ್ಕೆ ಆಗಮಿಸಿ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಶಿರಸಿ ಶೈಕ್ಷಣಿಕ ಜಿಲ್ಲೆಗಳ ಜಿ.ಪಂ. ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಶಿಕ್ಷಣ ಇಲಾಖೆಯ ಡಿ.ಡಿ.ಪಿ.ಐ ಮತ್ತು ಬಿ.ಇ.ಓ.ಗಳೊಂದಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆ ಪೂರ್ವ ಸಿದ್ಧತೆ ಕುರಿತಂತೆ ಪರಿಶೀಲನಾ ಸಭೇ ಯಲ್ಲಿ ಭಾಗವಹಿಸುವರು. ಸಂಜೆ 6.00ಕ್ಕೆ ಬೆಂಗಳೂರಿಗೆ ತೆರಳುವರು ಎಂದು ಸಚಿವರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

# ನಟ ಚಿರಂಜಿವಿ ಸರ್ಜಾ ಅವರಿಗೆ ಅಭಿಮಾನಿಗಳಿಂದ ಶೃದ್ದಾಂಜಲಿ



ಗದಗ : ಭಾನುವಾರ ಬೆಂಗಳೂರಿನಲ್ಲಿ ನಿಧನರಾದ ಖ್ಯಾತ ನಟ ಚಿರಂಜಿವಿ ಸರ್ಜಾ ಅವರಿಗೆ ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಅವರ ಅಭಿಮಾನಿಗಳಿಂದ ಶೃದ್ದಾಂಜಲಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ನಾಗರಾಜ ಮೆಣಸಗಿ, ಪ್ರಲ್ಹಾದ ಹೊಸಳ್ಳಿ, ಮಂಜುನಾಥ ಕೊಟ್ನಿಕಲ್, ಅಶೋಕ ಮಂದಾಲಿ, ಮಹಾಂತೇಶ ಅರಗಂಜಿ, ರಮೇಶ ಸಜ್ಜಗಾರ, ಮುತ್ತು ಜಡಿ, ಹೇಮಂತ ಗಿಡ್ಡಹನುಮಣ್ಣವರ, ಕುಮಾರ ಮಾರನಬಸರಿ, ಆನಂದ ಹಂಡಿ, ಮಲ್ಲೇಶ ಬಿಂಗಿ, ಸತೀಶ ಗಿಡ್ಡಹನುಮಣ್ಣವರ, ಕೊಪ್ಪದ, ಸೋಮು ಮೇಟಿ, ಬಸವರಾಜ ಮೇಟಿ, ಪ್ರವೀಣ ಹಂದೇಲಿ, ಮಂಜು ನಾಗರಾಳ, ಸುರೇಶ ಗುಲಗಂಜಿ, ಶ್ರೀಕಾಂತ ಗೂಳಪ್ಪನವರ, ಪ್ರವೀಣ ಮಾಯಣ್ಣವರ, ಗೋಣೇಪ್ಪ ದುರಗಣ್ಣವರ, ಶಶಿ ಸೇರಿದಂತೆ ಮುಂತಾದವರಿದ್ದರು.

# ಜಿ.ಪಂ ಉಪಕಾರ್ಯದರ್ಶಿಗಳಿಂದ ಚೆಕ್‌ಡ್ಯಾಂಗಳ ತನಿಖಾ ಕಾರ್ಯ

ಕೊಪ್ಪಳ, ಜೂನ್.–: ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ 2019-20ರಲ್ಲಿ ಜಿಲ್ಲೆಯ ವಿವಿಧ ಗ್ರಾಮ ಪಂಚಾಯತಿಗಳಲ್ಲಿ ಅನುಷ್ಠಾನಗೊಂಡ ಚೆಕ್‌ಡ್ಯಾಂಗಳ ತನಿಖಾ ಕಾರ್ಯವನ್ನು ಜಿಲ್ಲಾ ಪಂಚಾಯತನ ಉಪಕಾರ್ಯದರ್ಶಿ ಶರಣಬಸವರಾಜ ಅವರು ಕೈಗೊಳ್ಳಲಿದ್ದಾರೆ.

ನರೇಗಾ ಯೋಜನೆಯ ಚೆಕ್‌ಡ್ಯಾಂ ನಿರ್ಮಾಣದಡಿ ಅವ್ಯವಹಾರವಾಗಿರುವ ಕುರಿತು ದಿನಪತ್ರಿಕೆಗಳಲ್ಲಿ ವರದಿಗಳು ಪ್ರಕಟವಾದ ಹಿನ್ನೆಲೆಯಲ್ಲಿ ಜಿಲ್ಲಾ ಗುಣನಿಯಂತ್ರಕರಿಂದ ತನಿಖಾ ಕಾರ್ಯ ಕೈಗೊಳ್ಳಲಾಗಿತ್ತು. ಜಿಲ್ಲಾ ಗುಣನಿಯಂತ್ರಕರಿಂದ ಚೆಕ್‌ಡ್ಯಾಂ ಪರಿಶೀಲನೆ ಪ್ರಗತಿಯಲ್ಲಿರುವಾಗಲೇ ಕೋವಿಡ್-19 ಹಿನ್ನೆಲೆಯಲ್ಲಿ ದೇಶದಾದ್ಯಂತ ಲಾಕ್‌ಡೌನ್ ಆದ ನಿಮಿತ್ತ ಪರಿಶೀಲನೆಯನ್ನು ಮುಂದೂಡಲಾಗಿತ್ತು.

ಅದರಂತೆ ತನಿಖಾ ಕಾರ್ಯದ ಸಂಪೂರ್ಣ ಮೇಲುಸ್ತುವಾರಿಯನ್ನು ಜಿಲ್ಲಾ ಪಂಚಾಯತ್‌ನ ಈ ಹಿಂದಿನ ಉಪಕಾರ್ಯದರ್ಶಿಗಳಿಗೆಗೆ ವಹಿಸಲಾಗಿತ್ತು. ಆದರೆ ಅವರ ಸೇವಾ ನಿವೃತ್ತಿಯ ಕಾರಣದಿಂದ ಆ ಹುದ್ದೆಯು ಒಂದೂವರೆ ತಿಂಗಳುಗಳ ಕಾಲ ಭರ್ತಿಯಾಗದೆ ಇದ್ದಿದರಿಂದ ತನಿಖಾ ಕಾರ್ಯ ವಿಳಂಬವಾಗಿತ್ತು. ಸದ್ಯ ಉಪಕಾರ್ಯದರ್ಶಿಗಳ ಹುದ್ದೆಗೆ ವರ್ಗಾವಣೆಯಾಗಿ ಬಂದಿರುವ ಉಪಕಾರ್ಯದರ್ಶಿಗಳು ತನಿಖಾ ಕಾರ್ಯವನ್ನು ತ್ವರಿತವಾಗಿ ಪೂರ್ಣಗೊಳಿಸಲು ಕ್ರಮ ವಹಿಸುತ್ತಿದ್ದಾರೆ.

ಪ್ರಸ್ತುತ ಜಿಲ್ಲಾಗುಣ ನಿಯಂತ್ರಕರು ಜಿಲ್ಲೆಯ ವಿವಿಧ ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಿ, ಉಳಿದ ಕಾಮಗಾರಿ ಸ್ಥಳ ಪರಿಶೀಲನೆ ಕಾರ್ಯ ಮುಂದುವರಿಸಿರುತ್ತಾರೆ. ಅವರಿಂದ ಸ್ವೀಕೃತವಾದ ವರದಿಗಳನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಘುನಂದನ್ ಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸೇವಾ ನಿವೃತ್ತಿ ಹೊಂದಿದ ಡಾ. ಪ್ರೊ. ಎಂ. ಎಲ್. ಗುಳೇದಗುಡ್ಡರವರಿಗೆ ಬೀಳ್ಕೊಡುಗೆ



ಗದಗ–: ಗದಗ ನಗರದ ಆದರ್ಶ ಶಿಕ್ಷಣ ಸಮಿತಿ ವಾಣಿಜ್ಯ ಮಹಾವಿದ್ಯಾಲಯದ ಪ್ರಾಂಶುಪಾಲರಾಗಿ ಇತ್ತೀಚಿಗೆ ಸೇವಾ ನಿವೃತ್ತಿ ಹೊಂದಿದ ಡಾ. ಪ್ರೊ. ಎಂ. ಎಲ್. ಗುಳೇದಗುಡ್ಡ ರವರಿಗೆ ಹಳೆಯ ವಿದ್ಯಾರ್ಥಿಗಳು ಅವರ ನಿವಾಸಕ್ಕೆ ತೆರಳಿ ಸೇವಾ ನಿವೃತ್ತಿಯ ವಿಶ್ರಾಂತಿ ಜೀವನ ಆರೋಗ್ಯ ಹಾಗೂ ಸುಖಕರವಾಗಲೆಂದು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಮಂಜುನಾಥ ದಾಮೋದರ, ರೋಹಿತ ಹಬೀಬ, ಶ್ರೀಶೈಲ ಬಳಿಗಾರ, ಅಶೋಕ ನಾಯ್ಕ, ರವಿ ಮಣಕವಾಡ, ಕಿಶನ ಭಾರದ್ವಾಡ, ಶ್ರೀಕಾಂತ ಲಕ್ಕುಂಡಿಮಠ, ಅಶ್ವಿನಿ ಅಂಗಡಿ, ಪ್ರಮೋದ ಕೋಪರ್ಡೆ, ಬಸವರಾಜ ಐಲಿ, ಗುರು ಶಿಷ್ವಿನಹಳ್ಳಿ, ಸಂಜಯ ಅಂಗಡಿ ಉಪಸ್ಥಿತರಿದ್ದರು.

# ಗದಗ ಜಿಲ್ಲೆ: ಆರು ಜನರಲ್ಲಿ ಕೋವಿಡ್-19 ಸೋಂಕು ಧೃಡ

ಗದಗ.ಜೂನ್.8: ಮಹಾರಾಷ್ಟ್ರ ರಾಜ್ಯದ ಮುಂಬೈನಿಂದ ಇದೇ ದಿ. 5 ರಂದು ಜಿಲ್ಲೆಗೆ ಆಗಮಿಸಿದ ಕಡ್ಡಾಯ ಅವಧಿಯ ಪ್ರತ್ಯೇಕ ನಿಗಾಹದಲ್ಲಿದ್ದ ಜಿಲ್ಲೆಯ ಗಜೇಂದ್ರಗಡ ತಾಲೂಕಿನ 30 ವರ್ಷದ ಮಹಿಳೆ ಪಿ-5486, 22 ವರ್ಷದ ಪುರುಷ ಪಿ-5487, 46 ವರ್ಷದ ಪುರುಷ ಪಿ.5489, 12 ವರ್ಷದ ಬಾಲಕ ಪಿ-5490, 23 ವರ್ಷದ ಯುವತಿ ಪಿ-5491 ಸೇರಿದಂತೆ 5 ಜನರಲ್ಲಿ ಹಾಗೂ ದಿ 4 ರಂದು ಮಹಾರಾಷ್ಟ್ರದ ಸೋಲ್ಲಾಪುರದಿಂದ ಬೆಟಗೇರಿಗೆ ಆಗಮಿಸಿದ 42 ವರ್ಷದ ಮಹಿಳೆ ಪಿ-5488 ಸೇರಿ ಒಟ್ಟು 6 ಜನರಲ್ಲಿ ಇಂದು ಕೋವಿಡ್-19 ಸೋಂಕು ಇರುವುದು ಧೃಡಪಟ್ಟಿದ್ದು, ಸೋಂಕಿತರಿಗೆ ನಿಗಧಿತ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಗದಗ ಜಿಲ್ಲಾಧಿಕಾರಿ ಎಂ.ಜಿ.ಹಿರೇಮಠ ತಿಳಿಸಿದ್ದಾರೆ.

# ಕೊವಿಡ್-19: ಗದಗ ಜಿಲ್ಲೆಯ ಸ್ಥಿತಿಗತಿ

ಗದಗ.ಜೂನ್.8:ಸೋಮವಾರ ದಿ. 8 ರವರೆಗಿನ ಗದಗ ಜಿಲ್ಲೆಯ ಕೊವಿಡ್-19 ಸೋಂಕು ನಿಯಂತ್ರಣ ಪ್ರಕರಣಗಳ ಅಂಕಿ ಅಂಶಗಳನ್ನು ಜಿಲ್ಲಾಧಿಕಾರಿ ಎಂ.ಜಿ.ಹಿರೇಮಠ ಬಿಡುಗಡೆ ಮಾಡಿದ್ದಾರೆ.ಇದುವರೆಗೆ ಗದಗ ಜಿಲ್ಲೆಯಲ್ಲಿ ನಿಗಾಕ್ಕೆ ಒಳಗಾದವರ ಒಟ್ಟು ಸಂಖ್ಯೆ 6710. ಸೌಲಭ್ಯದೊಂದಿಗೆ ಆಸ್ಪತ್ರೆಯಲ್ಲಿ ಪ್ರತ್ಯೇಕವಾಗಿ ನಿಗಾದಲ್ಲಿರುವವರ ಸಂಖ್ಯೆ : 41 ಸೋಂಕಿನ ಪರೀಕ್ಷೆಗಾಗಿ ಸಂಗ್ರಹಿಸಿದ ಒಟ್ಟು ಮಾದರಿ: 7216 ನಕಾರಾತ್ಮಕವಾಗಿವೆ (ನೆಗೇಟಿವ್) ಎಂದು ವರದಿಯಾದ ಸಂಖ್ಯೆ: 7099 ವರದಿ ಬರಲು ಬಾಕಿ ಇರುವ ಸಂಖ್ಯೆ: 68.ಇಂದು ಧೃಡಪಟ್ಟ ಸಕಾರಾತ್ಮಕ (ಪಾಸಿಟಿವ್) ಪ್ರಕರಣಗಳು: 6.ಒಟ್ಟು ಕೊವಿಡ್-19 ಪಾಸಿಟಿವ್ ದೃಢಪಟ್ಟ ಪ್ರಕರಣಗಳು: 49.ಈ ಪೈಕಿ ಪಿ-166 ಹಾಗೂ ಪಿ-4082 ಮೃತಪಟ್ಟಿರುತ್ತಾರೆ. ಸೋಂಕಿನಿಂದ ಗುಣಮುಖರಾದವರು : ಒಟ್ಟು 33 ಜನ ಇಂದಿನ 6 ಪ್ರಕರಣಗಳು ಸೇರಿ 14 ಜನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ದಿ.02-06-2020 ರಿಂದ ರೈಲು ಮೂಲಕ ಮಹಾರಾಷ್ಟ್ರದಿಂದ ಗದಗ ರೈಲು ನಿಲ್ದಾಣಕ್ಕೆ 432 ಪ್ರಯಾಣಿಕರು ಆಗಮಿಸಿದ್ದು ಇದರಲ್ಲಿ 199 ಜನ ಗದಗ ಜಿಲ್ಲೆಗೆ ಸೇರಿದ್ದು ಇವರನ್ನು ಸಾಂಸ್ಥಿಕ ಕ್ವಾರಂಟೈನ್ ಇಡಲಾಗಿದೆ. ಉಳಿದ 233 ಬೇರೆ ಜಿಲ್ಲೆಯವರಾಗಿದ್ದು ಸಂಬಂಧಪಟ್ಟ ಜಿಲ್ಲೆಗಳಿಗೆ ಕಳುಹಿಸಲಾಗಿದೆ. 179 ಜನರ ಗಂಟಲು ದ್ರವ ಪರೀಕ್ಷೆಗೆ ಒಳಪಡಿಸಲಾಗಿದ್ದು ಅದರಲ್ಲಿ 08 ಜನರಿಗೆ ಸೋಂಕು ಸಕಾರಾತ್ಮಕ (ಪಾಸಿಟಿವ್) ಎಂದು ವರದಿ ಬಂದಿದು ಉಳಿದ 171 ಜನರ ವರದಿ ನಕಾರಾತ್ಮಕ (ನೆಗೆಟಿವ್) ಎಂದು ವರದಿಯಾಗಿರುತ್ತದೆ.

# ಭಕ್ತರಿಗೆ ಮಲೆಮಹದೇಶ್ವರ ಸ್ವಾಮಿಯ ದರ್ಶನ ಭಾಗ್ಯ

ಹನೂರು : ಲಾಕ್‌ಡೌನ್ ಹಿನ್ನಲೆ ಕಳೆದ 84 ದಿನಗಳಿಂದ ಭಕ್ತರಿಗೆ ಮಲೆಮಹದೇಶ್ವರ ಸ್ವಾಮಿಯ ದರ್ಶನ ಭಾಗ್ಯವನ್ನು ನಿಷೇಧಮಾಡಲಾಗಿತ್ತು. ಲಾಕಡೌನ್ ನಿಯಮದಲ್ಲಿ ಸರ್ಕಾರ ಕೆಲ ಸಡಿಲಿಕೆ ಮಾಡಿದ ಹಿನ್ನಲೆ ಸ್ವಾಮಿಯ ದೇಗುಲ ತೆಗಿದಿದ್ದು ಭಕ್ತರಿಗೆ ದರ್ಶನ ಭಾಗ್ಯ ದೂರೆತಿದೆ.

ಸೋಮವಾರ ಬೆಳ್ಳಿಗ್ಗೆ 4 ಘಂಟೆಯಿಂದ ವಿವಿಧ ಪೂಜಾ ಕೈಂಕರ್ಯ ನಡೆದು ಬೆಳ್ಳಿಗ್ಗೆ 7 ಗಂಟೆಯಿಂದ ಭಕ್ತರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿರುವ ಈ ದಿಸೆಯಲ್ಲಿ ರಾಜ್ಯದ ಮೂಲೆ ಮೂಲೆಗಳಿಂದ ನೂರಾರು ಸಂಖ್ಯೆಯ ಭಕ್ತರು ಬೆಟ್ಟಕ್ಕೆ ಆಗಮಿಸಿದ್ದರು.

ದೇವಸ್ಥಾನ ಎಡಭಾಗದಲ್ಲಿರುವ ರಂಗಮಂದಿರದ ಆವರಣದಲ್ಲಿ ಭಕ್ತರು ಕುಳಿತುಕೊಳ್ಳಲು ನಾಲ್ಕು ವಿಭಾಗಗಳಲ್ಲಿ ಕುರ್ಚಿಗಳನ್ನು ಅತ್ಯಂತ ವ್ಯವಸ್ಥಿತವಾಗಿ ಹಾಕಿ ಆಗಮಿಸಿದ ಪ್ರತಿಯೋಬ್ಬರಿಗೂ ಸಹ ಆರೋಗ್ಯ ತಪಾಸಣೆ ಮಾಡಿ ಸ್ಯಾನಿಟೇಸರ್ ನೀಡಿ ದರ್ಶನ ಪಡೆಯಲು ಅವಕಾಶ ನೀಡಲಾಯಿತು.

ಒಂದು ಭಾರಿಗೆ 180 ಜನರು ಸರಥಿ ಸಾಲಿನಲ್ಲಿ ನಿಂತರೆ ಇನ್ನೂ ಉಳಿದವರು ಕಾಯ್ದು ಕುಳಿತು ಬಳಿಕ ಮಲೆಮಹದೇಶ್ವರ ಸ್ವಾಮಿಯ ದರ್ಶನ ಪಡೆದು ಪುನಿತರಾದರು

ಮಾಸ್ಕ್ ಇಲ್ಲದವರಿಗೆ ಕಡಿಮೆ ಧರದಲ್ಲಿ ವಿತರಣೆ : ದೇಗುಲ ಪ್ರವೇಶಕ್ಕೂ ಮುನ್ನ ಪ್ರತಿಯೊಬ್ಬ ಭಕ್ತರಿಗೂ ಥರ್ಮಲ್ ಸ್ಕ್ರೀನಿಂಗ್ ಮಾಡಲಾಗುತ್ತಿದೆ. ಮಾಸ್ಕ್ ಕಡ್ಡಾಯ ಮಾಡಿರುವುದರಿಂದು ಮಾಸ್ಕ್ ಧರಿಸದೇ ಆಗಮಿಸುವವರನ್ನು ಒಳಗೆ ಪ್ರವೇಶಿಸದಂತೆ ನಿರ್ಬಂಧ ಏರಿಸಲಾಗಿತ್ತು.

ಆದರೆ ಮಲೆಮಹದೇಶ್ವರ ಸ್ವಾಮಿ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕಡಿಮೆ ಧರದಲ್ಲಿ ಮಾಸ್ಕ್ ನೀಡಿ ಅವಕಾಶ ಕಲ್ಪಿಸಲಾಗುತ್ತಿತ್ತು . ಸರಧಿ ಸಾಲಿನಲ್ಲಿ ದರ್ಶನ ಪಡೆಯುವ ವೇಳೆ ದಾಸೋಹ ಭವನದಲ್ಲಿ ಪ್ರಸಾಧ ಸ್ವೀಕಾರ ಮತ್ತು ಲಾಡು ಖರೀಧಿ ಕೇಂದ್ರದಲ್ಲೂ ಸಹ ಎಲ್ಲಾ ಭಕ್ತರು ಸಾಮಾಜಿಕ ಅಂತರವನ್ನು ಕಾಪಾಡಿಕೊಂಡು ಸರ್ಕಾರದ ನಿಯಮಗಳನ್ನು ಪಾಲಿಸಿ ಮಾದಪ್ಪನ ದರ್ಶನ ಪಡೆದರು.

ಇದೇ ವೇಳೆ ಜಿಲ್ಲಾಧಿಕಾರಿ ಎಮ್ ಆರ್ ರವಿ ನೇತ್ರತ್ವದ ವಿವಿಧ ಅದಿಕಾರಿಗಳ ತಂಡ ಮಲೆಮಹದೇಶ್ವರ ಸ್ವಾಮಿ ಸನ್ನಿದ್ದಿಗೆ ಆಗಮಿಸಿ ದರ್ಶನ ಪಡೆಯುವುದರ ಜೊತೆಗೆ ಪ್ರಾಧಿಕಾರದಿಂದ ಕೆಲ ಮಾಹಿತಿಗಳನ್ನು ಪಡೆದರು. ಬಳಿಕ ಮಾತನಾಡಿದ ಜಿಲ್ಲಾಧಿಕಾರಿಗಳು ಬೆಟ್ಟದಲ್ಲಿ ದೇವಸ್ಥಾನದ ಸಿಬ್ಬಂದಿ ಎಲ್ಲಾ ಕಡೆ ಮಾಸ್ಕ್ ಮತ್ತು ಗ್ಲೌಸ್, ಮತ್ತು ಸ್ಯಾನಿಟೇಸರ್ ಬಳಕೆ ಮಾಡಬೇಕು.

ಯಾರೊಬ್ಬ ಭಕ್ತರಿಗೂ ತೂಂದರೆ ಆಗದಂತೆ ಕ್ರಮ ವಹಿಸಬೇಕು ಹಾಗಯೇ ರಾತ್ರಿ ವೇಳೆ ತಂಗುವುದನ್ನು ನಿಷೇದಮಾಡಲಾಗಿದೆ ಅಲ್ಲದೆ ಗಡಿ ಭಾಗದ ತಮಿಳುನಾಡಿನಲ್ಲಿ ಕೊರೋನಾ ಪ್ರಕರಣಗಳು ಹೆಚ್ಚಿರುವ ಹಿನ್ನಲೆ ಅಲ್ಲಿನ ಭಕ್ತರು ತಾತ್ಕಲಿಕವಾಗಿ ನಿರ್ಬಂಧ ಮಾಡಲಾಗಿದ್ದು ಅವರನ್ನು ಗಡಿಯಲ್ಲಿಯೇ ತಡೆದು ವಾಪಸ್ ಕಳುಹಿಸಲು ನಿರ್ದರಿಸಲಾಗಿದೆ ಎಂದು ತಿಳಿಸಿದರು

# ಎಸ್‌ಎಸ್‌ಎಲ್‌ಸಿ ಪರೀಕ್ಷೆಗಾಗಿ ಸಹಾಯವಾಣಿ ಕಾರ್ಯಕ್ರಮ

ಶಿವಮೊಗ್ಗ, ಜೂನ್-08 : ಸಾರ್ವಜನಿಕ ಸಂಪರ್ಕ ಇಲಾಖೆಯು 2020ರ ಜೂನ್ 25 ರಿಂದ ಜುಲೈ 03 ರವರೆಗೆ ನಡೆಯುವ ಎಸ್.ಎಸ್.ಎಲ್.ಸಿ ಪರೀಕ್ಷೆಗಳು ಶಿವಮೊಗ್ಗ ಜಿಲ್ಲೆಯ 84 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, ಈ ಪರೀಕ್ಷಾ ಪೂರ್ವ ಸಿದ್ದತೆ, ಪರೀಕ್ಷಾ ಬರೆಯುವ ವಿದ್ಯಾರ್ಥಿಗಳಲ್ಲಿಗೊಂದಲಗಳಿದ್ದಲ್ಲಿ ಪರಿಹರಿಸಲು ಸಹಾಯವಾಣಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಕಚೇರಿಯ ಉಪನಿರ್ದೇಶಕರ ಕಚೇರಿ-08182-223851, ಶ್ರೀಮತಿ ಎನ್., ಎ.ಪಿ.ಸಿ. - 9449327833 ಹಾಗೂ ತಾಂತ್ರಿಕ ಸಹಾಯಕಿ ಲಕ್ಷ್ಮೀ ಹೆಚ್.ಸಿ -9686169017 ಇವರುಗಳನ್ನು ಸಹಾಯವಾಣಿ ಕಾರ್ಯಕ್ರಮದ ಉಸ್ತುವಾರಿಗಾಗಿ ನೇಮಿಸಲಾಗಿದೆ. ಈ ಅಧಿಕಾರಿಗಳು ಸಹಾಯವಾಣಿ ಕಾರ್ಯಕ್ರಮದಲ್ಲಿ ಹಾಜರಿದ್ದು, ದೂರವಾಣಿ ಮೂಲಕ ಬರುವಂತಹ ಕರೆಗಳನ್ನು ಸ್ವೀಕರಿಸಿ ಸಮಸ್ಯೆಗಳು ಹಾಗೂ ಗೊಂದಲಗಳಿಗೆ ಅಗತ್ಯ ಮಾಹಿತಿಯನ್ನು ಇಲಾಖಾ ಸುತ್ತೋಲೆಗಳು ಹಾಗೂ ನೋಡಲ್ ಅಧಿಕಾರಿಗಳ ಮಾರ್ಗದರ್ಶನದೊಂದಿಗೆ ನೀಡುವರು ಎಂದು ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.